1	2	3	4	5
7.	Minerva Circle area	Subbaiah road - Lalbagh road intersection	40	Phase - I
8.	M.G. Road area	Victoria road - Palm groove road intersection	500	Phase-II play ground (BMP)
9.	- do -	Richmond road Victoria road intersection	400	phase - II
10.	- do -	Ulsoor road - Kensington road intersection	320	Phase-II Private Land.
		Total	**11060**	

ಬೆಂಗಳೂರು ನಗರ ಪಾಲಿಕೆಯಲ್ಲಿ ಟೆಂಡರ್ ಕರೆಯದ ತುರ್ತು ಕಾಮಗಾರಿ ಕೆಲಸಗಳು

747(1091) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಹಾನಗರ ಪಾಲಿಕೆಯ ಮೇಯರ್ ನಿಧಿಯಿಂದ ಮಂಜೂರಾದ ಕಾಮಗಾರಿಗೆ ಟೆಂಡರ್ ಕರೆಯದೆ ಕೆಲಸ ಮಾಡಿಸಲು ಅನುಮತಿ ನೀಡಲಾಗಿದೆಯೇ?

ಆ) ಪಾರದರ್ಶಕತೆ ಹೆಸರಿನಲ್ಲಿ ಎಲ್ಲಾ ಕಾಮಗಾರಿಗಳನ್ನು (ತುಂಡು ಗುತ್ತಿಗೆ ತಡೆಯುವ ಟೆಂಡರ್ ಮೂಲಕವೇ ಮಾಡುವ ಸರ್ಕಾರದ ಉದ್ದೇಶದಿಂದ ಇದಕ್ಕೆ ವಿನಾಯಿತಿ ನೀಡಿದಂತಾಗುವುದಿಲ್ಲವೇ;

ಇ) ಮೇಯರ್ ನಿಧಿಗೆ ಎಷ್ಟು ಮೊತ್ತದವರೆಗೆ ಮಿತಿ ವಿಧಿಸಲಾಗಿದೆ?

ಈ) ಈ ಹಣಕ್ಕೆ ಟೆಂಡರ್ ಕರೆಯದೆ ತರ್ತು ಕಾಮಗಾರಿ ಕೈಗೊಳ್ಳುವುದರಿಂದ ಭ್ರಷ್ಟಾಚಾರಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ ಎಂದು ಸರ್ಕಾರ ಭಾವಿಸುವುದಿಲ್ಲವೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಪೂಜ್ಯ ಮಹಾಪೌರರ ನಿಧಿಯಿಂದ ಅನುಮೋದನೆಗೊಂಡ ಕಾಮಗಾರಿಗಳು ತುರ್ತಾಗಿದ್ದಲ್ಲಿ ಕೆಲಸದ ಅವಶ್ಯಕತೆಯನ್ನು ಪರಿಗಣಿಸಿ ರೂ. 5.00 ಲಕ್ಷ ಮೀರದ ಕೆಲವು ಕಾಮಗಾರಿಗಳಿಗೆ ಇಲಾಖಾ ವತಿಯಿಂದ ನಿರ್ವಹಿಸಲು ಅನುಮತಿ ನೀಡಲಾಗಿದೆ.

ಆ) ಕರ್ನಾಟಕ ಪಾರದರ್ಶಕತೆ ಅಧಿನಿಯಮದಲ್ಲಿ ಐದು ಲಕ್ಷ ಮೀರದ ಕಾಮಗಾರಿಗಳಿಗೆ ಟೆಂಡರ್ ಕರೆಯಲು ವಿನಾಯ್ತಿ ನೀಡಲಾಗಿದೆ. ಇದರಂತೆ ಅತಿ ತುರ್ತಾಗಿ ಕೈಗೊಳ್ಳಬೇಕಾಗಿರುವ ರೂ. ಐದು ಲಕ್ಷ ಮೀರದ ಕಾಮಗಾರಿಗಳನ್ನು ಮಾತ್ರ ಟೆಂಡರ್ ಕರೆಯದೇ ಇಲಾಖಾ ವತಿಯಿಂದ ಕೈಗೊಳ್ಳಲು ಅನುಮತಿ ನೀಡಲಾಗಿದೆ.

ಇ) 2002-03ನೇ ಸಾಲಿನಲ್ಲಿ ಮಹಾಪೌರರ ನಿಧಿಯಿಂದ ಕಾಮಗಾರಿಗೆ ರೂ. ಹತ್ತು ಕೋಟಿ ಎಪ್ಪತ್ತೈದು ಲಕ್ಷ ನಿಗಧಿಪಡಿಸಿದೆ.

ಈ) ಪೂಜ್ಯ ಮಹಾಪೌರರ ನಿಧಿಯಿಂದ ಕೈಗೆತ್ತಿಕೊಳ್ಳುವ ಅತೀ ತುರ್ತಾಗಿ ಮಾಡಲೇಬೇಕಾದ ಕಾಮಗಾರಿಗಳನ್ನು ಟೆಂಡರ್ ಕರಯದೇ ಪಾರದರ್ಶಕತೆ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆಗಳ ವ್ಯಾಪ್ತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿರುವ ಕಾರಣ, ಭ್ರಷ್ಟಾಚಾರದ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ವೃತ್ತ ಕಾಮಗಾರಿ ಅಭಿವೃದ್ಧಿ

748(1093) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರ ರಸ್ತೆ ಕೂಡುವಿಕೆ ವೃತ್ತ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತರಲು ಪಾಲಿಕೆ ಮುಂದಾಗಿದೆಯೇ?

ಆ) ಈ ವ್ಯಾಪ್ತಿಯಲ್ಲಿ ನಗರದ ಎಷ್ಟು ಪ್ರಮುಖ ವೃತ್ತಗಳನ್ನು ಅಭಿವೃದ್ಧಿ ಪಡಿಸಲಾಗುವುದು?

ಇ) ಈ ಯೋಜನೆಗೆ ನಿಗಧಿಪಡಿಸಿರುವ ಮೊತ್ತವೆಷ್ಟು?

ಈ) ಪ್ರತಿ ವೃತ್ತದಲ್ಲಿಯೂ ಅಳವಡಿಸಲಿರುವ ಅಭಿವೃದ್ಧಿ ಕಾಮಗಾರಿಗಳಾವುವು?

ಉ) ನಗರದ ಯಾವ ಯಾವ ವೃತ್ತದ ಎಷ್ಟು ರಸ್ತೆ ಕೂಡುವಿಕೆ ವೃತ್ತಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. (ನಗರದ ಪ್ರತಿ ವಿಧಾನ ಸಭಾ ಕ್ಷೇತ್ರಗಳವಾರು ವಿವರ ಒದಗಿಸಿ).

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಬೆಂಗಳೂರು ನಗರದಲ್ಲಿ ಗುರುತಿಸಲಾದ 106 ರಸ್ತೆ ಕೂಡುವಿಕೆ ವೃತ್ತಗಳನ್ನು ಅಭಿವೃದ್ಧಿ ಪಡಿಸುವ ಮೊದಲನೇ ಹಂತದ ಕಾಮಗಾರಿಯು ಪ್ರಗತಿಯಲ್ಲಿದೆ.

ಆ) 106.

ಇ) ರೂ. 1250.00 ಲಕ್ಷಗಳು.

1. ವಾಹನ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಕೂಡುವಿಕೆ ಸ್ಥಳಗಳಲ್ಲಿ ರಸ್ತೆ ಅಗಲಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದು.
2. ರಸ್ತೆ ಅಡಚಣೆಗಳನ್ನು ತೆರವು ಮಾಡಿ, ರಸ್ತೆ ವಿಭಜಕಗಳು ಹಾಗೂ ಸಂಚಾರಿ ದೀಪಗಳನ್ನು ಅಳವಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು.
3. ರಸ್ತೆ ಕೂಡುವಿಕೆಗಳಲ್ಲಿ ವಾಹನಗಳು ಸುಗಮವಾಗಿ ತಿರುಗಲು ಅನುವು ಮಾಡಿ ಕೊಡುವುದು.

ಉ) ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ.

ಅನುಬಂಧ

106 ಜಂಕ್ಷನ್ ಅಭಿವೃದ್ಧಿ ಪಟ್ಟಿ

ಪ್ಯಾಕೇಜ್ -1 ಶಿವಾಜಿನಗರ ವಿಧಾನ ಸಭಾ ಕ್ಷೇತ್ರ

ಶಾಸಕರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು

ಹಡ್ಸ್‌ನ್ ವೃತ್ತ ಪ್ರದೇಶ

ಕ್ರಮ ಸಂಖ್ಯೆ	ಜಂಕ್ಷನ್ ಹೆಸರು
1.	ಮೈಸೂರು ಬ್ಯಾಂಕ್ ವೃತ್ತ
2.	ಡಿಸ್ಟ್ರಿಕ್ಸ್ ಆಫೀಸ್ ಹಾಗೂ ನೃಪತುಂಗ ರಸ್ತೆ